# 70

# ಮಹಾ ನಿಯೋಗ

## (28:16-20)

ಮತ್ತಾಯ ಸುವಾರ್ತೆಯು ಮಹತ್ತರ ನಿಯೋಗವನ್ನು ನೀಡುವದರೊಂದಿಗೆ ಮುಕ್ತಾಯವಾಗುತ್ತದೆ, ಯೇಸುವಿನ ಶಿಷ್ಯರಿಗೆ ಜಗತ್ತಿನಲ್ಲಿ ಎಲ್ಲಾ ದೇಶದ ಜನರನ್ನು ಶಿಷ್ಯರನ್ನಾಗಿ ಮಾಡುವದಕ್ಕೆ ಕರೆಯಲಾಗಿದೆ. ಮತ್ತಾಯನು ಯೇಸು ಪುನರುತ್ಥಾನದ ನಂತರ ಯೆರೂಸಲೇಮಿನಲ್ಲಿ ಎಣ್ಣೆ ಮರಗಳ ಬೆಟ್ಟದ ಮೇಲೆ ಕಾಣಿಸಿಕೊಂಡದ್ದನ್ನು ಮತ್ತು ಪರಲೋಕಕ್ಕೆ ಏರಿ ಹೋದದ್ದನ್ನು ಸೇರಿಸಿರುವದಿಲ್ಲ. ಆತನು ಜಗತ್ತಿನಾದ್ಯಂತ ಸುವಾರ್ತಾ ಸೇವೆಯ ಮೇಲೆ ಕೇಂದ್ರಿಕರಿಸುತ್ತಾನೆ - ಯೆಹೂದ್ಯರ ಮತ್ತು ಅನ್ಯಜನರ ರಕ್ಷಣೆಯನ್ನು ಒಂದೇ ರೀತಿಯಲ್ಲಿ ನೋಡುತ್ತಾನೆ.

### ದೃಶ್ಯ ಜೋಡಣೆ (28:16, 17)

**16ಬಳಿಕ ಹನ್ನೊಂದು ಮಂದಿ ಶಿಷ್ಯರು ಗಲಿಲಾಯಕ್ಕೆ ಹೋಗಿ ಯೇಸು ತಮಗೆ ಗೊತ್ತುಮಾಡಿದ್ದ ಬೆಟ್ಟಕ್ಕೆ ಸೇರಿದರು. 17ಅಲ್ಲಿ ಆತನನ್ನು ಕಂಡು ಆತನಿಗೆ ಅಡ್ಡ ಬಿದ್ದರು; ಆದರೆ ಕೆಲವರು ಸಂದೇಹಪಟ್ಟರು.**

**ವಚನ 16.** ಜೋಡಿಸುವ ಪದ **ಆದರೆ** (*de*) ಮುಂದೆ ಬರುವ ಯೆಹೂದ್ಯ ನಾಯಕರು ಹರಡಿದ ಸುಳ್ಳು ವದಂತಿ ಮತ್ತು ಯೇಸು ಜೀವದಿಂದಿದ್ದಾನೆ ಎಂಬ ಸತ್ಯವನ್ನು ಅರಿತಿರುವ ಸೈನಿಕರು ಇವರ ಮಧ್ಯದಲ್ಲಿರುವ ವ್ಯತ್ಯಾಸವನ್ನು ತೋರಿಸುತ್ತದೆ, ಯೇಸು ಪುನರುತ್ಥಾನ ಹೊಂದಿದ್ದಾನೆ ಎಂಬುದನ್ನು ನಂಬಿದ ಅಪೊಸ್ತಲರಿಗೆ ಆನಂದ ಮಿಶ್ರಿತ ಆಶ್ಚರ್ಯ ಅವರಿಗೆ ಅವರ ದುಃಖವನ್ನು ಜಯಿಸಲು ಸಹಾಯಕವಾಯಿತು. ಮುಂದೆ ಏನಾಗುವದೋ ಅದರ ಕುರಿತು ಅನಿಶ್ಚಿತತೆಯಲ್ಲಿದ್ದರು, ಅವರು ಯೇಸು ಸ್ತ್ರೀಯರ ಮೂಲಕ ಕಳುಹಿಸಿದ, ದೇವದೂತನ ಸೂಚನೆಗಳಿಗೆ ವಿಧೇಯರಾದರು (28:7, 10). **ಹನ್ನೊಂದು ಮಂದಿ** - ಈಗ ಅವರು ಯೂದನಿಲ್ಲದೇ ಇದ್ದಾರೆ (27:5) - **ಗಲಿಲಾಯಕ್ಕೆ ಹೋಗುತ್ತಾರೆ,** ಅಲ್ಲಿ ಯೇಸು ಕಾಯುತ್ತಿರುತ್ತೇನೆ ಎಂದು ಹೇಳಿದ್ದಾನೆ. ಅವರು ಇನ್ನೂ ಅದನ್ನು ಅರಿತಿಕೊಳ್ಳಲಿಲ್ಲ ಆದರೆ ಆತನಿಗಾಗಿ ಅವರ ನಿಜವಾದ ಕಾರ್ಯ ಪ್ರಾರಂಭವಾಗಲಿಕ್ಕಿತ್ತು.

ಶಿಷ್ಯರು **ಯೇಸು ತಮಗೆ ಗೊತ್ತುಮಾಡಿದ್ದ ಬೆಟ್ಟಕ್ಕೆ ಸೇರಿದರು.** ಕರ್ತನು ಅವರಿಗೆ ತನ್ನ ಮರಣಕ್ಕಿಂತ ಮುಂಚಿತವಾಗಿ ಸೂಚನೆಯನ್ನು ನೀಡುವಾಗ ಯಾವುದು ಎಂಬುದನ್ನು ಹೇಳಿರಬಹುದು (26:32). ನಂತರ, ಸಹ ಅವನು ಸ್ತ್ರೀಯರೊಂದಿಗೆ ಮಾತನಾಡಿದಾಗ ಬೆಟ್ಟವನ್ನು ನಿರ್ದಿಷ್ಟಪಡಿಸಿರಬಹುದು (28:10). ಮತ್ತಾಯನ ಸುವಾರ್ತೆಯಲ್ಲಿ, ಗುಡ್ಡಗಳು ಮತ್ತು ಬೆಟ್ಟಗಳು ಪ್ರಕಟನೆಯ ಮತ್ತು ದೇವರೊಂದಿಗೆ ಅನ್ಯೋನ್ಯತೆಯ ಸ್ಥಳಗಳಾಗಿದ್ದವು (5:1; 14:23; 15:29; 17:1; 21:1). ಬೆಟ್ಟದ ಮೇಲೆ, ಯೇಸು ತನ್ನ ಶಿಷ್ಯರಿಗೆ ಮಹತ್ತರ ನಿಯೋಗವನ್ನು ನೀಡಿದನು.

**ವಚನ 17.** ಅಪೊಸ್ತಲರು ಯೇಸುವನ್ನು ದೃಷ್ಟಿಸುತ್ತಾ, ಅವರು ಆತನನ್ನು ಆರಾಧಿಸುತ್ತಿರುವಾಗ, ಸ್ತ್ರೀಯರು ಮಾಡಿದ ಹಾಗೆ (28:9); ಗುಂಪಿನಲ್ಲಿ ಸೇರಿಬಂದವರಲ್ಲಿ ಕೆಲವರು ಬಹಳ **ಸಂದೇಹಪಟ್ಟರು** (*distazō*). R. T. France ರವರು ಸಂದೇಹಪಡುವವರನ್ನು ಇನ್ನೊಂದು

ದೃಷ್ಟಿಕೋನದಲ್ಲಿ ನೋಡುತ್ತಾರೆ, ಉಪಯೋಗಿಸಿದ ಕ್ರಿಯಾಪದಕ್ಕೆ ಒತ್ತು ನೀಡುತ್ತಾರೆ: "ಕ್ರಿಯಾಪದವು *distazō* ಸ್ಥಿರವಾದ ಅಪನಂಬಿಕೆಯನ್ನು ಸೂಚಿಸುವದಿಲ್ಲ ಬದಲಾಗಿ ಅನಿಶ್ಚಿತತೆ ಮತ್ತು ಹಿಂಜರಿಕೆಯನ್ನು ಸೂಚಿಸುತ್ತದೆ (ಹೋಲಿಸಿ 14:31, ಹೊಸ ಒಡಂಬಡಿಕೆಯಲ್ಲಿ ಕೇವಲ ಬೇರೆ ಉಪಯೋಗ ಮಾಡಲಾಗಿದೆ)."[1] ಅಪೊಸ್ತಲರು ನಾವು ಪುನರುತ್ಥಾನ ಹೊಂದಿದ ಕ್ರಿಸ್ತನನ್ನು ನೋಡಿದ್ದೇವೆ ಎಂಬ ಸ್ತ್ರೀಯರ ಸಾಕ್ಷಿಯನ್ನು ನಂಬುವದರಲ್ಲಿ ನಿಧಾನರಾಗಿದ್ದರು (ಲೂಕ 24:11). ಆದುದರಿಂದ, ಯೇಸು ಅವರಿಗೆ ತನ್ನ ಕೈಗಳನ್ನು ಮತ್ತು ಕಾಲುಗಳನ್ನು ತೋರಿಸಿದನು ಮತ್ತು ಅವರ ಉಪಸ್ಥಿತಿಯಲ್ಲಿ ಮೀನು ತಿಂದನು (ಲೂಕ 24:39-43; ನೋಡಿರಿ ಯೋಹಾನ 20:24-29). ಖಂಡಿತವಾಗಿಯೂ, ಸಂದೇಹಪಟ್ಟವರು ಪುನರುತ್ಥಾನ ಹೊಂದಿದ ಕ್ರಿಸ್ತನನ್ನು ನೋಡುವ ಅವಕಾಶ ದೊರೆಯದಿರುವ ಗಲಿಲಾಯದವರಾಗಿದ್ದರು.

## ಯೇಸುವಿನ ನಿಯೋಗ (28:18-20)

ಯೇಸು ಜನರಿಗೆ "ಅಧಿಕಾರವಿದ್ದವನಂತೆ ಬೋಧಿಸಿದನು, ಅವರ ಶಾಸ್ತ್ರಿಗಳಂತೆ ಅಲ್ಲ" (7:29). ಆತನು ಪಾರ್ಶ್ವವಾಯು ರೋಗಿಯನ್ನು ಸ್ವಸ್ಥಪಡಿಸುವದರ ಮೂಲಕ ತನಗೆ ಪಾಪಗಳನ್ನು ಕ್ಷಮಿಸಿಬಿಡುವದಕ್ಕೆ ತನಗಿರುವ ಅಧಿಕಾರವನ್ನು ಪ್ರದರ್ಶಿಸಿದನು (9:2-8). ಅವನು ಈ ಲೋಕದಲ್ಲಿದ್ದಾಗ ಹೊಂದಿಕೊಂಡ ಅಧಿಕಾರ - ಬೋಧಿಸುವದು ಸ್ವಸ್ಥಪಡಿಸುವದು ಮತ್ತು ಪಾಪಗಳನ್ನು ಕ್ಷಮಿಸುವದು - ಇವು ಆತನಿಗೆ ತಂದೆಯಿಂದ ಕೊಡಲ್ಪಟ್ಟಿದ್ದವು (11:27; ನೋಡಿರಿ 21:23-27). ಯೇಸು ಹನ್ನೆರಡು ಜನರನ್ನು ಮಿತಿಯಲ್ಲಿರುವ ನಿಯೋಗದೊಂದಿಗೆ ಕಳುಹಿಸಿದನು ಮತ್ತು "ಅವರಿಗೆ ಅಶುದ್ಧ ಆತ್ಮಗಳ ಮೇಲೆ, ಅವುಗಳನ್ನು ಬಿಡಿಸಲು ಮತ್ತು ಪ್ರತಿಯೊಂದು ಕಾಯಿಲೆಯನ್ನು ಸ್ವಸ್ಥಪಡಿಸಲು ಅಧಿಕಾರವನ್ನು ಕೊಟ್ಟನು" (10:1). ಮತ್ತೊಮ್ಮೆ ಅವರನ್ನು ಹೊರಗೆ ಕಳುಹಿಸುತ್ತಿದ್ದಾನೆ; ಆದರೆ ಈ ಬಾರಿ ಈಡೀ ಲೋಕದಲ್ಲಿ ಸಂಪೂರ್ಣವಾದ ರಕ್ಷಣೆಯ ಸಂದೇಶದೊಂದಿಗೆ ಕಳುಹಿಸುತ್ತಿದ್ದಾನೆ.

### "ಎಲ್ಲಾ ಅಧಿಕಾರ" (28:18)

**18ಆಗ ಯೇಸು ಹತ್ತಿರಕ್ಕೆ ಬಂದು - ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ.**

**ವಚನ 18. ಯೇಸು - ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ** ಎಂದು ಪ್ರಕಟಿಸುತ್ತಾನೆ. ತಂದೆಯು ತನಗೆ ಎಲ್ಲಕ್ಕಿಂತಲೂ ಉನ್ನತವಾದ ಅಧಿಕಾರವನ್ನು ನೀಡಿದ್ದಾನೆ ಎಂಬುದು ಇದರ ಅರ್ಥ. ಆತನು ತನ್ನ ತಂದೆಯಿಂದ ಕ್ರೈಸ್ತಯುಗದ ಒಡೆಯನಾಗುವದಕ್ಕೆ ಆಯಲ್ಪಟ್ಟಿದ್ದಾನೆ. ಪೌಲನು ನಂತರ ಹೇಳುತ್ತಾನೆ, "ಈ ಕಾರಣದಿಂದಾಗಿ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಟನಾದ ಹೆಸರುಗಳಿಗಿಂತ ಶ್ರೇಷ್ಟವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ ..." (ಫಿಲಿಪ್ಪಿ 2:9). ಧರ್ಮದಲ್ಲಿ ಮಾಡುವದೆಲ್ಲವನ್ನೂ "ಆತನ ಹೆಸರಿನಲ್ಲಿ" ಮಾಡಬೇಕು ಅಥವಾ ಆತನ ಅಧಿಕಾರದಲ್ಲಿ ಮಾಡಬೇಕು. ಆತನ ಪುನರುತ್ಥಾನಕ್ಕೆ ಪೂರ್ವದಲ್ಲಿ ಸಂಗತಿ ಇದಾಗಿರಲಿಲ್ಲ (ಯೋಹಾನ 15:16; 16:23-26), ಆದರೆ ಮಾನವ ಇತಿಹಾಸದ ಈ ಕೊನೆಯ ದಿನಗಳಲ್ಲಿ ಇದು ಹಾಗೆಯೇ ಇದೆ (ಲೂಕ 24:46, 47; ಅಪೊಸ್ತಲರ ಕೃತ್ಯಗಳು 2:38; 4:12; ಕೊಲಸ್ಸೆ 3:17). ಯೇಸು ದೇವರ ಬಲಗಡೆಯಲ್ಲಿ ಕೂತುರೊಂಡಿದ್ದಾನೆ, ಶ್ರೇಷ್ಟವಾದ ಮಹಿಮೆಯನ್ನು ಹೊಂದಿದ್ದಾನೆ (22:44; 26:64; ಅಪೊಸ್ತಲರ ಕೃತ್ಯಗಳು 2:34-36; ಫಿಲಿಪ್ಪಿ 2:9-11). ಆತನು ಸಿಂಹಾಸನಾಸೀನನಾಗಿದ್ದಾನೆ ಮತ್ತು ತನ್ನ ರಾಜ್ಯವನ್ನು ಆಳುತ್ತಿದ್ದಾನೆ (1 ಕೊರಿಂಥ 15:24-28); ಆತನು ತನ್ನ ಸಭೆಯ ತಲೆಯಾಗಿದ್ದಾನೆ (ಎಫೆಸ 1:20-23; ಕೊಲಸ್ಸೆ 1:18).

**“ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ” (28:19)**

**19ಆದುದರಿಂದ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿ.**

**ವಚನ 19.** ಎಲ್ಲಾ ಅಧಿಕಾರವನ್ನು ಹೊಂದಿರುವ ಯೇಸು ಹೇಳಿದ್ದು, “ಆದುದರಿಂದ ನೀವು ಹೊರಟುಹೋಗಿ ಶಿಷ್ಯರನ್ನಾಗಿ ಮಾಡಿರಿ” “ಹೋಗು” ಎಂಬ ಗ್ರೀಕ್ ಕೃದಂತ “ನೀವು ಹೋಗುತ್ತಿರುವಾಗ” ಅಥವಾ “ನೀವು ಹೋಗುತ್ತಿರುವ ಹಾಗೆ” ಎಂದು ಸಹ ಅನುವಾದಿಸಬಹುದು. ಆದಾಗ್ಯೂ, ಒಂದು ಕೃದಂತವು ಅಜ್ಞಾವಾಚಕದ ಒತ್ತಡವನ್ನು ಹಂಚಿಕೊಳ್ಳುತ್ತದೆ.[2] ಇದನ್ನು Morris ರವರು ಹೀಗೆ ಹೇಳುತ್ತಾರೆ. “ಯೇಸು ತನ್ನ ಶಿಷ್ಯರಿಗೆ, ಶಿಷ್ಯರನ್ನಾಗಿ ಮಾಡುವದರ ಮೇಲೆ ಒತ್ತು ನೀಡಿದಾಗ್ಯೂ, ಹೊರಟು ಹೋಗಿರಿ ಅಲ್ಲದೇ ಶಿಷ್ಯರನ್ನಾಗಿ ಮಾಡಿರಿ ಎಂದು ಹೇಳುತ್ತಾನೆ.”[3]

“ಶಿಷ್ಯರನ್ನಾಗಿ ಮಾಡಿರಿ” (*mathēteuō*) ಇದರ ಅರ್ಥ ಜನರಿಗೆ ಕ್ರಿಸ್ತನ ಹಿಂಬಾಲಕರಾಗಲು ಬೋಧಿಸುವದು. ಶಿಷ್ಯತ್ವವು ಕೇವಲ ಯೇಸುವಿನಲ್ಲಿ ವೈಯಕ್ತಿಕ ವಿಶ್ವಾಸವನ್ನಿರಿಸುವದು ಮಾತ್ರವಲ್ಲ ಬದಲಾಗಿ ಆತನ ನೈತಿಕ ಪ್ರಮಾಣಗಳಿಗೆ ಸ್ವ - ಇಚ್ಛೆಯಿಂದ ಅಧೀನಪಡಿಸಿಕೊಳ್ಳುವದಾಗಿದೆ.

ಯೇಸು **ಎಲ್ಲಾ ದೇಶಗಳ** ಎಂಬ ತನ್ನ ದರ್ಶನವನ್ನು ಅಪೊಸ್ತಲರಿಗೆ ನೀಡುತ್ತಾನೆ. ಮಿತಿಯುಳ್ಳ ನಿಯೋಗದಲ್ಲಿ ಅಪೊಸ್ತಲರಿಗೆ “ತಪ್ಪಿಹೋದ ಕುರಿಗಳಂತಿರುವ ಇಸ್ರಾಯೇಲರ ಬಳಿಗೆ ಮಾತ್ರ” ಹೋಗಲು ಸೂಚಿಸಿದ್ದನು; ಅವರಿಗೆ “ಅನ್ಯ ಜನರ ಬಳಿಗೆ” ಅಥವಾ “ಸಮಾರ್ಯದ ಯಾವುದೇ ಪಟ್ಟಣಕ್ಕೆ ಹೋಗುವದಕ್ಕೆ ನಿರ್ಭಂದವಿತ್ತು” (10:5, 6). ಈ ನಿಯೋಗದಲ್ಲಿ, ಸುವಾರ್ತೆಯ ಸಂದೇಶವು ಎಲ್ಲಾ ಜನರಿಗಾಗಿದ್ದಾರೆ (ಮಾರ್ಕ 16:15).

“ದೇಶಗಳು” (from *ethnos*) ಎಂಬುದಕ್ಕೆ ಗ್ರೀಕ್ ಪದ ಅನೇಕಾವರ್ತಿ “ಅನ್ಯ ಮತದವರು” ಎಂದು ಅನುವಾದಿಸಲಾಗಿದೆ (4:15; 6:32; 10:5, 18; 12:18, 21) - ಇದರ ಅರ್ಥ ಇಸ್ರಾಯೇಲರನ್ನು ಹೊರತು ಪಡಿಸಿ. ಈ ಸನ್ನಿವೇಶದಲ್ಲಿ, ಪದವು ಇಸ್ರಾಯೇಲರನ್ನು ಒಳಗೊಂಡಿದೆ. ಮಹತ್ತರ ನಿಯೋಗದ ಇನ್ನೊಂದು ಲೂಕನು ದಾಖಲಿಸಿರುವ ವಿಷಯದಲ್ಲಿ ಯೇಸು “ಪಶ್ಚಾತ್ತಾಪ ಮತ್ತು ಪಾಪಗಳ ಕ್ಷಮಾಪಣೆ ಆತನ ಹೆಸರಿನಲ್ಲಿ ಎಲ್ಲಾ ದೇಶಗಳಿಗೆ, ಯೆರೂಸಲೇಮಿನಿಂದ ಪ್ರಾರಂಭಿಸಿ ಪ್ರಕಟಿಸಬೇಕು” ಎಂದು ಹೇಳುತ್ತಾನೆ (ಲೂಕ 24:47; ಒತ್ತಿ ಹೇಳಿರುವದು ಸೇರಿದೆ). ಸುವಾರ್ತೆಯು ಯೆರೂಸಲೇಮಿನಲ್ಲಿದ್ದ ಯೆಹೂದ್ಯರಿಗೆ ಮೊದಲು ಬೋಧಿಸಲ್ಪಡಬೇಕು (ಅಪೊಸ್ತಲರ ಕೃತ್ಯಗಳು 1-7), ನಂತರ, ಅದು ಯುದಾಯ, ಸಮಾರ್ಯದಲ್ಲಿ ಹರಡಬೇಕು (ಅಪೊಸ್ತಲರ ಕೃತ್ಯಗಳು 8;9) ಮತ್ತು ವಿಶಾಲವಾದ ರೋಮಾ ಸಾಮ್ರಾಜ್ಯದಲ್ಲಿ ಸಾರಲಾಯಿತು (ಅಪೊಸ್ತಲರ ಕೃತ್ಯಗಳು 10-28).

ಮತ್ತಾಯನ ಸುವಾರ್ತೆ ಯೇಸುವಿನ ವಂಶಾವಳಿಯ ಸಂಬಂಧವನ್ನು ಅಬ್ರಹಾಮನವರೆಗೆ ಸ್ಥಾಪಿಸುವದರೊಂದಿಗೆ ಪ್ರಾರಂಭಿಸುತ್ತಾನೆ (1:1, 2). ಇಸ್ರಾಯೇಲರು ಅಸ್ತಿತ್ವದಲ್ಲಿ ಬರುವ ಪೂರ್ವದಲ್ಲಿ ದೇವರು ಅಬ್ರಹಾಮನಿಗೆ ಆತನ ಮೂಲಕ ಎಲ್ಲಾ ಜನಾಂಗಗಳಿಗೆ ಆಶೀರ್ವಾದ ದೊರೆಯುತ್ತದೆ ಎಂದು ವಾಗ್ದಾನ ಮಾಡಿದ್ದನು (ಆದಿಕಾಂಡ 12:3; 22:18). ಈ ಆಶೀರ್ವಾದ ಎಲ್ಲಾ ಜನರಿಗೆ ರಕ್ಷಣೆಯನ್ನು ನೀಡುವ ಯೇಸುವಿಗಾಗಿ ಲೋಕವು ಎದುರು ನೋಡುತಿತ್ತು (ಆದಿಕಾಂಡ 3:8, 16). ಹಳೆ ಒಡಂಬಡಿಕೆಯ ಅಡಿಯಲ್ಲಿ, ದೇವರು ಇಸ್ರಾಯೇಲರನ್ನು ತನ್ನ ಸ್ವಂತ ಜನರನ್ನಾಗಿ ಆಯ್ದುಕೊಂಡನು. ಹೊಸ ಒಡಂಬಡಿಕೆಯಲ್ಲಿ ಹಾಗೂ ದೇವಜನರ ವ್ಯಕ್ತಿತ್ವವು ಜನಾಂಗಳಿಂದಲ್ಲ ದೇವರೊಂದಿಗೆ ಅವರ ಮೆಸ್ಸೀಯನ ಮೂಲಕ ಅವರಿಗಿರುವ ಸಂಬಂಧದ ಮೂಲಕವಾಗಿ (ನೋಡಿರಿ 3:9; 8:11, 12; 12:21; 21:28-32, 41-43; 22:8-10; 24:14, 31; 26:13).[4]

ಶಿಷ್ಯರನ್ನಾಗಿ ಮಾಡುವದಲ್ಲದೇ ಅವರಿಗೆ **ದೀಕ್ಷಾಸ್ನಾನ ಮಾಡಿಸುವದನ್ನು** ಸಹ ಒಳಗೊಂಡಿದೆ. ದೀಕ್ಷಾಸ್ನಾನ (ನೀರಿನಲ್ಲಿ ಮುಳುಗುವದು) ಸ್ನಾನಿಕನಾದ ಸೇವೆಯ ಪ್ರಾಮುಖ್ಯವಾದ ಭಾಗವಾಗಿತ್ತು. ಅವನು ಜನರನ್ನು ಪಶ್ಚಾತ್ತಾಪಪಡುವಂತೆ ಮತ್ತು ಬರಲಿಕ್ಕಿರುವ ದೇವರ ರಾಜ್ಯಕ್ಕಾಗಿ ಸಿದ್ಧತೆಯನ್ನು ಮಾಡಿಕೊಳ್ಳುವದಕ್ಕೆ ಕರೆನೀಡುತ್ತಿದ್ದನು (ನೋಡಿರಿ ವ್ಯಾಖ್ಯಾನ 3:6). ಯೇಸು ಸ್ವತಃ ದೀಕ್ಷಾಸ್ನಾನ ತೆಗೆದುಕೊಂಡು ನಂತರ, ಆತನ ಸೇವೆಯು ಯೋಹಾನ ಸೇವೆಗಿಂತ ಉನ್ನತಿಗೇರಿತು: "ಯೇಸು ಯೋಹಾನನಿಗಿಂತ ಹೆಚ್ಚು ಜನರನ್ನು ಶಿಷ್ಯರನ್ನಾಗಿ ಮಾಡುತ್ತಿದ್ದನು ಮತ್ತು ದೀಕ್ಷಾಸ್ನಾನ ಮಾಡಿಸುತ್ತಿದ್ದನು (ಯೇಸು ತಾನೇ ದೀಕ್ಷಾಸ್ನಾನ ನೀಡದಿದ್ದರೂ, ಆತನ ಶಿಷ್ಯರು ನೀಡುತ್ತಿದ್ದರು)" (ಯೋಹಾನ 4:1, 2). ಇಲ್ಲಿ ತನ್ನ ಅಪೊಸ್ತಲರಿಗೆ ಯೇಸುವಿನ ಆಜ್ಞೆ ಏನೆಂದರೆ ಜನರನ್ನು ಶಿಷ್ಯರನ್ನಾ ಮಾಡುವ ಪ್ರಕ್ರಿಯೆಯಲ್ಲಿ ದೀಕ್ಷಾಸ್ನಾನ ಮಾಡಿಸುವದು. ಇದು ಆತನನ್ನು ಆಲಿಸುವವರಿಗೆ ದೊಡ್ಡ ಆಶ್ಚರ್ಯವೇನಾಗಿರಲಿಲ್ಲ.

ಮಹತ್ತರ ನಿಯೋಗದ ದೀಕ್ಷಾಸ್ನಾನವು ಮೊದಲು ಯೇಸು ಮತ್ತು ಯೋಹಾನನು ನೀಡುತ್ತಿದ್ದ ದೀಕ್ಷಾಸ್ನಾನಕ್ಕಿಂತ, ಯೇಸು ಕ್ರೂಜೆಯಲ್ಲಿ ಮರಣವನ್ನು ಹೊಂದಿ ಸಮಾಧಿಯಿಂದ ಎದ್ದು ಬಂದ ಆ ಸಮಯದಿಂದ ವಿಭಿನ್ನವಾಗಿತ್ತು. ಅಪೊಸ್ತಲರು ಸಂಪೂರ್ಣ ಸುವಾರ್ತೆಯನ್ನು ಮೊದಲನೆಯ ಸಾರಿ ಉಪದೇಶಿಸಿದಾಗ ಮತ್ತು ಮಹತ್ತರ ನಿಯೋಗದ ದೀಕ್ಷಾಸ್ನಾನವನ್ನು ಪ್ರಯೋಗಿಸಿದಾಗ ದೇವರರಾಜ್ಯ (ಸಭೆ) ಅಸ್ತಿತ್ವದಲ್ಲಿ ಬಂತು (ಅಪೊಸ್ತಲರ ಕೃತ್ಯಗಳು 2).

ಬೋಧಿಸಲ್ಪಟ್ಟ ಯಾವುದೇ ವ್ಯಕ್ತಿ ಕ್ರೂಜೆಗೆ ಹಾಕಲ್ಪಟ್ಟ ಮತ್ತು ಪುನರುತ್ಥಾನ ಹೊಂದಿದ ಕರ್ತನನ್ನು ನಂಬಿದ ನಂತರ ದೀಕ್ಷಾಸ್ನಾನಕ್ಕೆ ಯೋಗ್ಯವಾದ ಅಭ್ಯರ್ಥಿಯಾಗುತ್ತಿದ್ದನು. ವ್ಯಕ್ತಿಯು ಮೊದಲು ಪಶ್ಚಾತ್ತಾಪಪಡಬೇಕು ಅಥವಾ ಪಾಪದಿಂದ ತಿರುಗಿಕೊಳ್ಳಬೇಕು ಮತ್ತು ದೇವರ ಕಡೆಗೆ ತಿರುಗಿಕೊಳ್ಳಬೇಕು (ಲೂಕ 13:3, 5; ಅಪೊಸ್ತಲರ 2:38). ಪಶ್ಚಾತ್ತಾಪವನ್ನು ಅನುಸರಿಸಿ ಅವರು ಕ್ರಿಸ್ತನು ದೇವರ ಮಗನು ಎಂಬ ನಂಬಿಕೆಯನ್ನು ಅರಿಕೆ ಮಾಡಬೇಕು (ಅಪೊಸ್ತಲರ ಕೃತ್ಯಗಳು 8:37; ರೋಮಾಪುರ 10:9, 10). ನಂಬಿಕೆಯ ಕೊನೆಯ ಕ್ರಿಯೆಯಾಗಿ, ಅವನು ದೀಕ್ಷಾಸ್ನಾನವನ್ನು ಹೊಂದಬೇಕು (ಅಪೊಸ್ತಲರ ಕೃತ್ಯಗಳು 2:38).

ಖಚಿತವಾಗಿರಲು, ದೀಕ್ಷಾಸ್ನಾನವು "ಪಾಪಗಳ ಕ್ಷಮಾಪಣೆಗಾಗಿ" (ಅಪೊಸ್ತಲರ ಕೃತ್ಯಗಳು 2:38), ಈ ದೀನತೆಯ ಕಾರ್ಯದಲ್ಲಿ, ಒಬ್ಬನು ಕ್ರಿಸ್ತನ ತ್ಯಾಗಪೂರ್ವಕವಾದ ಕ್ರೂಜೆಯ ಮರಣದ ಆಶೀರ್ವಾದವು ದೊರೆಯುತ್ತದೆ. ಯೇಸು ಹೇಳಿದ್ದು, "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು" (ಮಾರ್ಕ 16:16). ದೀಕ್ಷಾಸ್ನಾನವು ರಕ್ಷಣೆಯ ಪ್ರಾಥಮಿಕ ಅವಶ್ಯಕತೆಯಾಗಿದೆ. ದೀಕ್ಷಾಸ್ನಾನದ ಮೂಲಕ, ಒಬ್ಬನು ಕ್ರಿಸ್ತನಲ್ಲಿ ಪ್ರವೇಶಿಸುತ್ತಾನೆ (ರೋಮಾಪುರ 6:3, 4) ಮತ್ತು ಆತನ ಸಭೆಯಲ್ಲಿ (1 ಕೊರಿಂಥ 12:13) ಮತ್ತು ಪವಿತ್ರಾತ್ಮನ ವರವನ್ನು ಹೊಂದಿಕೊಳ್ಳುತ್ತಾನೆ (ಅಪೊಸ್ತಲರ ಕೃತ್ಯಗಳು 2:38).

ಮಹತ್ತರ ನಿಯೋಗದ **ದೀಕ್ಷಾಸ್ನಾನವು ತಂದೆ, ಮಗ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ಆಗಬೇಕು.** ಈ ವಾಕ್ಯಭಾಗವು ತ್ರಯೇಕತ್ವದ ಸಂಕ್ಷಿಪ್ತ ವರ್ಣನೆಯಾಗಿದೆ (3:17 ರಲ್ಲಿರುವ ವಿಮರ್ಶೆಯನ್ನು ನೋಡಿರಿ). "ಹೆಸರು" *(onoma)* ಎಂಬ ಪದಕ್ಕೆ ಗ್ರೀಕ್ ಪದ ಏಕವಚನದಲ್ಲಿದೆ ಅದು ದೇವರ ಐಕ್ಯತೆಯನ್ನು ಸೂಚಿಸುತ್ತದೆ. ತ್ರಯೇಕತೆಯ ಮೂರು ವ್ಯಕ್ತಿಗಳು ತಂದೆ ಮಗ ಮತ್ತು ಪವಿತ್ರಾತ್ಮ ಎಂದು ಗುರುತಿಸಲಾಗಿದೆ (ನೋಡಿರಿ 1 ಕೊರಿಂಥ 12:4-7; 2 ಕೊರಿಂಥ 13:14; ಎಫೆಸ 4:4-6; 1 ಪೇತ್ರ 1:2; ಯೂದ 20, 21).

ಸಾಮಾನ್ಯ ವಿಚಾರವು ಸ್ಪಷ್ಟವಾಗಿದ್ದರೂ, ವಾಕ್ಯಭಾಗದ ಸಂಕ್ಷಿಪ್ತ ಅರ್ಥವು ವಾದವಿವಾದಕ್ಕೆ ಒಳಗಾಗಿದೆ. ಇದು ದೀಕ್ಷಾಸ್ನಾನ ಹೊಂದುವ ವ್ಯಕ್ತಿಯ ಕುರಿತಾಗಿ ಮಾತನಾಡುವದಕ್ಕೆ ಒಂದು ಸೂತ್ರವಾಗಿದೆಯೋ? ಇದು ಸಮಂಜಸವಾದ ಅಭ್ಯಾಸವಾಗಿರುವಾಗ ಅಪೊಸ್ತಲರ

ಕೃತ್ಯದಲ್ಲಿ ಕ್ರೈಸ್ತರಾದವರು "ಯೇಸುವಿನ ಹೆಸರಿನಲ್ಲಿ" ದೀಕ್ಷಾಸ್ನಾನ ಹೊಂದಿದರು ಎಂದು ಹೇಳಲಾಗಿದೆ (ಅಪೊಸ್ತಲರ ಕೃತ್ಯಗಳು 2:38; 10:48) ಅಥವಾ "ಕರ್ತನಾದ ಯೇಸುವಿನ ಹೆಸರಿನಲ್ಲಿದೆ" (ಅಪೊಸ್ತಲರ ಕೃತ್ಯಗಳು 8:16; 19:5).

ಈ ಕಾರಣದಿಂದಾಗಿ, ವಾಕ್ಯಭಾಗವು ಸರಳವಾಗಿ ದೀಕ್ಷಾಸ್ನಾನದ ಹಿಂದಿರುವ ಅಧಿಕಾರವು ಉಲ್ಲೇಖಿಸುತ್ತದೆ. "ಹೆಸರಿನಲ್ಲಿ" ಅರ್ಥ "ಅಧಿಕಾರದಿಂದ," ದೈವತ್ವದಲ್ಲಿ ಐಕ್ಯತೆಯಿಲ್ಲದೇ ಹೋದದರಿಂದ ಮಹತ್ತರ ನಿಯೋಗ ಮತ್ತು ಅಪೋಸ್ತಲರ ಕೃತ್ಯದಲ್ಲಿರುವ ಐತಿಹಾಸಿಕ ಕೃತ್ಯಗಳಲ್ಲಿ ವಿರೋಧಭಾವ ಇರುವದಿಲ್ಲ.

ಗ್ರೀಕ್ ಕೃದಂತ "ಒಳಗೆ" ಇದರ ಅರ್ಥ "ಒಳಗಡೆ" ಈ ವಾಕ್ಯಭಾಗವು "ಹೆಸರಿನಲ್ಲಿ" ತ್ರಯೇಕ ದೇವರ ಸೊತ್ತಾಗುವದನ್ನು ಸೂಚಿಸುತ್ತದೆ. ಈ ಸಂಗತಿಯಲ್ಲಿ, ವಾಕ್ಯಭಾಗವು ವಿಶ್ವಾಸಿಯ ಹೊಸ ಭಕ್ತಿಯೊಂದಿಗೆ ಮತ್ತು ದೇವರೊಂದಿಗೆ ಸಂಬಂಧವನ್ನು ಕಾರ್ಯಮಾಡುವಂಥದ್ದಾಗಿದೆ.

### "ನಾನು ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಬೋಧಿಸು" (28:20)

**[20]ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು.**

**ವಚನ 20.** ದೀಕ್ಷಾಸ್ನಾನವನ್ನು ಹೊಸ ಪ್ರಾರಂಭ, ಕೊನೆಯಲ್ಲ ಎಂಬ ದೃಷ್ಟಿಕೋನ ದಲ್ಲಿ ನೋಡಬೇಕು. ಯೇಸು ಅಪೋಸ್ತಲರಿಗೆ ತನ್ನ ಹೊಸ ಶಿಷ್ಯರಿಗೆ, **ನಾನು ನಿಮಗೆ ಆಜ್ಞಾಪಿಸಿದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ** ಎಂದು ಹೇಳಿ ದನು. ಆತನು ಅವರಿಗೆ ಸುಮಾರು ಮೂರು ವರ್ಷಗಳ ಕಾಲ ಅಸಂಖ್ಯಾತ ವಿಶಿಷ್ಟವಾದ ಸತ್ಯಗಳನ್ನು ಬೋಧಿಸಿದ್ದನು. ಆತನು ಪರಲೋಕಕ್ಕೆ ಏರಿಹೋದ ನಂತರ ಪವಿತ್ರಾತ್ಮವನ್ನು ಕಳುಹಿಸುವದಾಗಿ ಹೇಳಿದ್ದನು, ಆತನು ಅವರಿಗೆ ಯೇಸುವಿನ ಬೋಧನೆಗಳನ್ನು ಜ್ಞಾಪಿಸುವನು ಮತ್ತು ಅವರನ್ನು ಎಲ್ಲಾ ಸತ್ಯದೆಡೆಗೆ ಮಾರ್ಗದರ್ಶನ ಮಾಡುವನು (ಯೋಹಾನ 14:26; 15:26, 27; 16:12-15). ಯೇಸುವಿನ ಮಹತ್ತರ ನಿಯೋಗದಲ್ಲಿ ಅಪೊಸ್ತಲರ ನಂಬಿಗಸ್ತಿಕೆ ಮತ್ತು ಹೊಸ ಶಿಷ್ಯರನ್ನು ಉತ್ಪಾದಿಸುವದನ್ನು ಅಪೊಸ್ತಲರ ಕೃತ್ಯಗಳಲ್ಲಿ ದಾಖಲಿಸಲಾಗಿದೆ. "ಇವರು ಅಪೊಸ್ತಲರ ಬೋಧನೆ ಕೇಳುವದರಲ್ಲಿಯೂ, ಸಹೋದರ ಅನ್ಯೋನ್ಯತೆಯಲ್ಲಿಯೂ, ರೊಟ್ಟಿ ಮುರಿಯುವದರಲ್ಲಿಯೂ, ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು" (ಅಪೊಸ್ತಲರ ಕೃತ್ಯಗಳು 2:42).

### "ನಾನು ಯಾವಾಗಲೂ ನಿಮ್ಮ ಸಂಗಡ ಇರುತ್ತೇನೆ" (28:20)

**[20]ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ.**

**ವಚನ 20.** ಯೇಸು ಮಹತ್ತರ ನಿಯೋಗವನ್ನು ತನ್ನ ಪ್ರಸನ್ನತೆ ಯಾವಾಗಲು ನೆಲೆಯಾಗಿರುತ್ತದೆ ಎಂಬ ವಾಗ್ದಾನದೊಂದಿ ಮುಕ್ತಾಯಗೊಳಿಸಿದನು: **ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ.** ಕ್ರೈಸ್ತ ಯುಗವು ಕ್ರಿಸ್ತನು ತಿರುಗಿ ಬಂದು, ಮತ್ತು ಪರಲೋಕದಲ್ಲಿ ನಿತ್ಯಜೀವ ಪ್ರಾರಂಭವಾಗುವ ಕ್ಷಣದವರೆಗೆ ಇರುತ್ತದೆ, ಯೇಸು ತನ್ನ ಕಾರ್ಯವನ್ನು ಮಾಡುತ್ತಿರುವ ತನ್ನ ಶಿಷ್ಯರೊಂದಿಗೆ ಇರುತ್ತಾನೆ. ಮತ್ತಾಯ 1:23ರಲ್ಲಿ ಮಗುವಾದ ಯೇಸುವಿಗೆ "ಎಮ್ಮಾನುವೇಲ" ಎಂದು ಹೆಸರಿಡುತ್ತಾರೆ, ಯೇಸು,

ನಮ್ಮನ್ನು ಆಳುವ ದೇವರಾಗಿರುವಾಗ, ಆತನ ಶಿಷ್ಯರಾದ ನಮಗೆ ಆ ಹೆಸರು "ಇಮ್ಮಾನುವೇಲ" ನಿರ್ದಿಷ್ಟವಾಗಿ "ದೇವರು ನಮ್ಮೊಂದಿಗೆ ಇದ್ದಾನೆ" ಎಂದು ಸೂಚಿಸುತ್ತದೆ.[5]

## ಪಾಠಗಳು

## ಮಹಾನಿಯೋಗದ ಶ್ರೇಷ್ಟತೆ (28:18-20)

ನಮ್ಮ ಕರ್ತನು ಮತ್ತಾಯ 28:18-20ರಲ್ಲಿ ಮಹತ್ತರ ನಿಯೋಗವನ್ನು ನಮಗೆ ದಯಪಾಲಿಸಿದ್ದಾನೆ. ಇದನ್ನು "ಮಹತ್ತರವಾದದ್ದು" ಎಂದು ಕರೆಯಲು ಕಾರಣವೆಂದರೆ ಇಲ್ಲಿ ಮಾನವನ ಯಾವುದೇ ಪ್ರಕಟನೆಗೆ ಎಂದಿಗೂ ಪ್ರಾಮುಖ್ಯತೆಯಿಲ್ಲ. ಜನರು ಇದನ್ನು ಅತ್ಯಂತ ಪವಿತ್ರವಾದ ಕಾರ್ಯ ಮಾನವನ ಮಾತುಗಳಲ್ಲಿ ಎಂದಿಗೂ ಸ್ಪಷ್ಟಪಡಿಸಲು ಅಥವಾ ನಶ್ವರ ಮನುಷ್ಯನಿಗೆ ತಲುಪಿಸಲು ಸಾಧ್ಯವಿಲ್ಲ ಎಂದು ವರ್ಣಿಸಿದ್ದಾರೆ. ಕನಿಷ್ಟ ಆರು ಕಾರಣಗಳಿಂದಾಗ ಮಹತ್ತರ ನಿಯೋಗವು "ಶ್ರೇಷ್ಟ"ವಾಗಿದೆ: (1) ಅದರ ಹಿಂದೆ ಇರುವ ಯೋಜನೆ (ಎಫೆಸ 3:8-11), (2) ಅದರ ಹಿಂದೆ ಇರುವ ಅಧಿಕಾರ (7:29; 28:18), (3) ಅದರ ಜಾಗತೀಕ ಸ್ವರೂಪ (28:19; ಅಪೊಸ್ತಲರ ಕೃತ್ಯಗಳು 26:16-18), (4) ಜನರನ್ನು ಒಟ್ಟಾಗಿ ಸೇರಿಸುವ ಅದರ ಶಕ್ತಿ (ಎಫೆಸ 2:13-19; 4:4-6), (5) ಅದರ ಶಾಶ್ವತತೆ (28:20), ಮತ್ತು (6) ಆತ್ಮಕ್ಕೆ ಅದು ನೀಡುವ ಬೆಲೆಗೆ ಒತ್ತು ನೀಡುವದು (16:26).

## ಮಹಾ ನಿಯೋಗ (28:18-20)

ಆತನು ಪರಲೋಕದಲ್ಲಿರುವ ತನ್ನ ತಂದೆಯ ಬಳಿಗೆ ಹಿಂತಿರುಗುವ ಪೂರ್ವದಲ್ಲಿ, ಯೇಸುವಿಗೆ ಒಂದು ಕಾರ್ಯವನ್ನು ಸಂಪೂರ್ಣಗೊಳಿಸಬೇಕಾಗಿತ್ತು: ಭೂಲೋಕದಲ್ಲಿ ತನ್ನ ಕಾರ್ಯವನ್ನು ಮುಂದುವರೆಸಿಕೊಂಡು ಹೋಗುವದಕ್ಕಾಗಿ ನೇಮಿಸುವದು. ಅವನು ಬಿಟ್ಟು ಹೋಗುವಾಗ ಮಾಡಿದ ಕಾರ್ಯ, ಅನೇಕಾವರ್ತಿ "ಮಹತ್ತರ ನಿಯೋಗ" ಎಂದು ಕರೆಯಲ್ಪಡುತ್ತದೆ. ಇದು ಮೊದಲು ಅಪೊಸ್ತಲರಿಗೆ ಕೊಡಲ್ಪಟ್ಟಿತು; ಆದರೆ ಇದನ್ನು ಆತನ ಸಭೆಗೆ ಉದ್ದೇಶಿಸಲಾಗಿದೆ. "ಯುಗದ ಸಮಾಪ್ತಿಯವರೆಗೆ" (28:20). ಈ ಸಂದೇಶದ ಸಂಪೂರ್ಣ ಸಾರಾಂಶವನ್ನು ಒಂದು ಸ್ಥಳದಲ್ಲಿ ನೀಡಲಾಗಿಲ್ಲ. ಯೇಸು ಈ ಸಂದೇಶದ ವಿವಿಧ ಅಂಶಗಳನ್ನು ವಿವಿಧ ಸಮಯದಲ್ಲಿ ತಾನು ಪುನರುತ್ಥಾನ ಹೊಂದಿ ಪರಲೋಕಕ್ಕೆ ಏರಿ ಹೋಗುವದರ ಮಧ್ಯದ ನಲವತ್ತು ದಿವಸಗಳ ಅವಧಿಯಲ್ಲಿ ತಿಳಿಸಿದ್ದಾನೆ. ಈ ನಿಯೋಗದ ಸಂಪೂರ್ಣ ಸಾರಾಂಶವನ್ನು ಹೊಂದಿಕೊಳ್ಳಬೇಕಾದರೆ, ನಾವು ಪವಿತ್ರಾತ್ಮನು ಒದಗಿಸುವ ವಿಷಯಗಳನ್ನು ಒಟ್ಟಾಗಿ ಸೇರಿಸಬೇಕು (28:18-20; ಮಾರ್ಕ 16:15, 16; ಲೂಕ 24:46-49).

## ಸಂಕ್ಷೇಪ ಸಂಗ್ರಹ

ಜೀವನವು ಏನಾಗಿದೆ ಎಂಬ ಪ್ರಶ್ನೆಗಳ ತಕ್ಕದಾದ ಉತ್ತರ ಕೊಡಲು ಮತ್ತಾಯ ಪುಸ್ತಕದ ಅಧ್ಯಾಯನವು ನಮಗೆ ಸಹಾಯ ಮಾಡುತ್ತದೆ.

*ಈ ರಾಜನು ಯಾರು, ಮತ್ತು ಆತನು ಯಾಕೆ ಬಂದನು?* ದೇವ ಕುಮಾರನು ನಮಗೆ ರಕ್ಷಣೆ ತರಲು ಈ ಭೂಮಿಗೆ ಬಂದನು! ದೀರ್ಘವಾಗಿ ನಿರೀಕ್ಷಿಸಿದ ಮೆಸ್ಸೀಯಾ ಕನ್ಯೆಯಲ್ಲಿ ಜನಿಸಿದನು, ಪಾಪ ರಹಿತ ಜೀವಿತ ಜೀವಿಸಿದನು, ಕ್ರೂಜೆಗೆ ಹಾಕಲ್ಪಟ್ಟನು, ಮತ್ತು ಸತ್ತವರೊಳಗಿಂದ ಎದ್ದನು! ಭೂಲೋಕವನ್ನು ಬಿಟ್ಟು ಹೋಗವ ಮೊದಲು ಬರಲಿಕ್ಕಿರುವ ಆತನ ರಾಜ್ಯದ ಅಸ್ತಿವಾರವನ್ನು ಆ ಸ್ಥಳದಲ್ಲಿ ಇಟ್ಟನು. ಆತನ ಪುನರುತ್ಥಾನದ ತಕ್ಷಣವೇ ಪ್ರಥಮ ಪಂಚಶತ್ತಮ ದಿನದಂದು ಈ ರಾಜ್ಯವು ಬಂತು.

*ಮುಂದೆ ಏನಾಗುತ್ತದೆ?* ಯೇಸು ಹಿಂತಿರುಗಿ ಬರುವನು, ಮತ್ತು ಅಂತಿಮ ನ್ಯಾಯ ತೀರ್ಪು ಆಗುವದು. ಆ ದಿನಕ್ಕಾಗಿ ನಾವು ಸಿದ್ಧರಾಗುವದು ಮತ್ತು ಸಿದ್ಧರಾಗಿರುವದು ಯೇಸುವಿನ ಬಯಕೆಯಾಗಿದೆ! ನಾವು ಕ್ರಿಸ್ತನ ಹಿಂಬಾಲಕರಾಗಬೇಕು ಮತ್ತು ಹೊಸ ಒಡಂಬಡಿಕೆಯಲ್ಲಿ ಕಂಡುಕೊಂಡಿರುವ ಆತನ ಬೋಧನೆ ಪ್ರಕಾರ ಜೀವಿಸಬೇಕು.

---

ಟಿಪ್ಪಣಿಗಳು

[1]R. T. France, *The Gospel According to Matthew,* The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 412. [2]ಇದರಲ್ಲಿನ ಭಾಷೆಯನ್ನು ಪರಿಮಿತದ ಆಜ್ಞೆಯೊಂದಿಗೆ ಹೋಲಿಸಿರಿ: "ಹೋಗಿರಿ ... ಸಾರಿ ಹೇಳುತ್ತಾ, ಹೋಗಿರಿ" (10:6, 7). [3]Leon Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 746, n. 30. [4]France, 414. [5]Robert H. Mounce, *Matthew,* New International Biblical Commentary (Peabody, Mass.: Hendrickson Publishers, 1991), 268.

## ಪುನರುತ್ಥಾನದ ತರುವಾಯ ನಲವತ್ತು ದಿನಗಳ ಕಾಲವಧಿಯಲ್ಲಿ ಕ್ರಿಸ್ತನ ಪ್ರತ್ಯಕ್ಷತೆ

| | |
|---|---|
| 1. ಸಮಾಧಿ ಬಳಿಯಲ್ಲಿ ಮಗ್ದಲದ ಮರಿಯಳಿಗೆ | ಮಾರ್ಕ 16:9-11; ಯೋಹಾನ 20:11-18 |
| 2. ಸಮಾಧಿ ಬಿಟ್ಟುಹೋದ ಸ್ತ್ರೀಯರಿಗೆ | ಮತ್ತಾಯ 28:8-10 |
| 3. ಯೆರೂಸಲೇಮಿನಲ್ಲಿ ಪೇತ್ರನಿಗೆ | ಲೂಕ 24:34; 1 ಕೊರಿಂಥ 15:5 |
| 4. ಎಮ್ಮಾಹುಗೆ ಹೋಗುವ ದಾರಿಯಲ್ಲಿ ಇಬ್ಬರು ಶಿಷ್ಯರಿಗೆ | ಮಾರ್ಕ 16:12, 13; ಲೂಕ 24:13-32 |
| 5. ಯೆರೂಸಲೇಮಿನಲ್ಲಿ ಮೆಲ್ಮೋಣೆಯಲ್ಲಿ ಹತ್ತು ಜನ ಅಪೊಸ್ತಲರಿಗೆ (ತೋಮನನ್ನು ಬಿಟ್ಟು) | ಮಾರ್ಕ 16:14; ಲೂಕ 24:36-43; ಯೋಹಾನ 20:19-25 |
| 6. ಯೆರೂಸಲೇಮಿನಲ್ಲಿ ಮೆಲ್ಮೋಣೆಯಲ್ಲಿ ಹನ್ನೊಂದು ಜನ ಅಪೊಸ್ತಲರಿಗೆ (ತೋಮನು ಒಳಗೊಂಡು) | ಯೋಹಾನ 20:26-29; 1 ಕೊರಿಂಥ 15:5 |
| 7. ಗಲಿಲಾಯ ಸಮುದ್ರದ ಬಳಿಯಲ್ಲಿ ಏಳು ಜನ ಶಿಷ್ಯರಿಗೆ | ಯೋಹಾನ 21:1-23 |
| 8. ಗಲಿಲಾಯ ಬೆಟ್ಟದಲ್ಲಿ ಹನ್ನೊಂದು ಜನ ಅಪೊಸ್ತಲರಿಗೆ | ಮತ್ತಾಯ 28:16-20; ಮಾರ್ಕ 16:15-18 |
| 9. 500 ಜನರಿಗಿಂತ ಜಾಸ್ತಿ ಶಿಷ್ಯರಿಗೆ | ಕೊರಿಂಥ ಮಾರ್ಕ 15:6 |
| 10. ಯಾಕೋಬ, ಯೇಸುವಿನ ಸಹೋದರನಿಗೆ | 1 ಕೊರಿಂಥ 15:7 |
| 11. ಎಣ್ಣೆ ಗುಡ್ಡದ ಮೇಲೆ | ಮಾರ್ಕ 16:19; ಲೂಕ 24:44-53; ಅಪೊಸ್ತಲರ ಕೃತ್ಯಗಳು 1:3-8; 1 ಕೊರಿಂಥ 15:7 |